ನಾನು ಹೇಳಿದಂತಹ ಈ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ, ಪರಿಗಣನೆಗೆ ತೆಗೆದುಕೊಂಡು ತಮ್ಮದೇ ಆದಂತಹ ನಿರ್ಧಾರವನ್ನು ಸಭೆಯಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಪ್ರತ್ಯೇಕವಾದ ಒಂದು ಪ್ರಸ್ತಾವನೆ ಇದಕ್ಕೆ ಬೇಕಾಗಿಲ್ಲ. ಇದು ಪಾರ್ಲಿಮೆಂಟಿನಲ್ಲಿ ಕೂಡ ಇದೇ ರೀತಿ ತೀರ್ಮಾನ ಆಗಿದೆ.

"On an occasion the discussion on the Address postponed for sometime in favour of the Government Bill Without a formal motion".

This has been decided long back in the Lok Sabha.

ಆದ್ದರಿಂದ ಇವರು ಹೇಳಿರತಕ್ಕದ್ದು ವಿಧಿ ಬಿಂದು ನಿಲ್ಲುವುದಕ್ಕೆ ಶಕ್ತಿ ಇಲ್ಲ. ನಿಲ್ಲಿಸಿ ಮುಂದಿನ ಕಾರ್ಯಕ್ರಮಗಳಾದ ಮೇಲೆ ತೆಗೆದುಕೊಳ್ಳೋಣ.

Sri. H. Ekanthaiah : This is nothing but anarchy....

(INTERRUPTIONS)

ಗಮನ ಸೆಳೆಯುವ ಸೂಚನೆಗಳು

ಆಶ್ರಯ ಯೋಜನೆಯ ಮನೆಗಳ ರಿಜಿಸ್ಟ್ರೇಷನ್ ಫೀಯನ್ನು ರದ್ದು ಮಾಡುವ ಬಗ್ಗೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ) ಮಾನ್ಯ ಅಧ್ಯಕ್ಷರೇ, ಆಶ್ರಯ ಯೋಜನೆಯ ಮನೆಗಳ ರಿಜಿಸ್ಟ್ರೇಷನ್ ಫೀ ಅನ್ನು ರದ್ದು ಮಾಡಿಸುವ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಧರ್ಮಸಿಂಗ್ (ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ,

ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಸರ್ಕಾರವೇ ಕಟ್ಟಿಸಿ, ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿರುವುದರಿಂದ ಮತ್ತು ಫಲಾನುಭವಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಪರಿಗಣಿಸಿ, ಹಾಗೂ ಸರ್ಕಾರಕ್ಕೆ ಇದರಿಂದ ಆಗುವ ನಷ್ಟವನ್ನು ಪರಿಗಣಿಸಿ, ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಮನೆಗಳ ದಸ್ತಾವೇಜುಗಳ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಫೀಯನ್ನು ಶೇಕಡ 50 ರಷ್ಟು ಮಾತ್ರ ಮನ್ನಾ ಮಾಡಲು ದಿನಾಂಕ 6.1.1994ರ ಆದೇಶ : ಅಧಿಸೂಚನೆ ನಂ. ಆರ್ಡಿ 162 ಇಎಸ್‌ಎಂ 93 ರಲ್ಲಿ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ.

ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರದ ವತಿಯಿಂದ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಹಂಚಿಕೆ ಮಾಡಲಾದ ಮನೆಗಳನ್ನು ನೋಂದಾಯಿಸಲು ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಈ ದಿನದ ದಿನಾಂಕ 8.2.1994 ರ ಸಚಿವ ಸಂಪುಟದಲ್ಲಿ ತಾತ್ವಿಕ ತೀರ್ಮಾನ ಕೈಗೊಳ್ಳಲಾಗಿದೆ. ಏನೆಂದರೆ, ಆಶ್ರಯ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಕಟ್ಟಲಾಗುವ ಇ.ಡಬ್ಲ್ಯೂ.ಎಸ್.ಮನೆಗಳನ್ನು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳಿಗಾಗಿ ಕಟ್ಟಲಾಗುವ ಇ.ಡಬ್ಲ್ಯೂ.ಎಸ್. ಮನೆಗಳನ್ನು ಮತ್ತು ಅಂಬೇಡ್ಕರ್ ಶತಮಾನೋತ್ಸವ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಕಟ್ಟಲಾಗಿರುವ ಮನೆಗಳಿಗೆ ಕ್ರಮಾನುಸಾರ ಸಾಲದ ಮೊತ್ತ 10 ಸಾವಿರ ರೂಪಾಯಿಗಳು ಇವೆ. ಅಲ್ಲದೆ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಕೊಳಚೆ

ಪ್ರದೇಶದ ಫಲಾನುಭವಿಗಳಿಗೆ ಪುನರ್ವಸತಿ ಕಲ್ಪಿಸಿಕೊಡುವ ಸಲುವಾಗಿ ಮನೆಗಳನ್ನು ಕಟ್ಟಲಾಗಿದ್ದು, ಇದಕ್ಕೆ ಸಾಲದ ಮೊತ್ತ 28,000 ರೂಪಾಯಿಗಳಿವೆ. ಒಟ್ಟಾರೆ ಈ ಸಾಲದ ಮೊತ್ತಕ್ಕೆ ಫಲಾನುಭವಿಗಳು ಮುದ್ರಾಂಕ ಹಾಗೂ ನೋಂದಣಿ ಫೀ ವಿನಾಯಿತಿ ನೀಡುವ ಸಲುವಾಗಿ ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿದೆ. ಮುದ್ರಾಂಕ ಹಾಗೂ ನೋಂದಣಿ ಫೀಯಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಈಗಾಗಲೇ ಯೋಜಿಸಿದಂತೆ, ಆಶ್ರಯ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ 91,000 ಮನೆಗಳನ್ನು, ನಗರ ಪ್ರದೇಶಗಳ ಮಟ್ಟದಲ್ಲಿ 15,000 ಮನೆಗಳನ್ನು ಹಾಗೂ ಅಂಬೇಡ್ಕರ್ ಶತಮಾನೋತ್ಸವ ಅಂಗವಾಗ ನಗರ ಮಟ್ಟದಲ್ಲಿ 10,000 ಮನೆಗಳನ್ನು ಮತ್ತು ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 30,000 ಮನೆಗಳನ್ನು ಕಟ್ಟಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ಒಟ್ಟು ಅಂದಾಜು 20 ಕೋಟಿ ರೂಪಾಯಿಗಳು ತಗುಲುತ್ತಿದ್ದು, ಈ ಶುಲ್ಕ ಪಾವತಿ ಬಗ್ಗೆ ಸರ್ಕಾರ ಈ ದಿನ ಸಂಪೂರ್ಣ ವಿನಾಯಿತಿ ನೀಡಿದೆ. ತತ್ಸಂಬಂಧ, ಅವಶ್ಯ ಆದೇಶ ಹೊರಡಿಸಲಾಗುವುದು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಜನರ ಈ ಒಂದು ಕಷ್ಟವನ್ನು ಅರ್ಥಮಾಡಿಕೊಂಡು ನಮ್ಮ ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದಕ್ಕೆ ನಾನು ದುರ್ಬಲವರ್ಗದವರೆಲ್ಲರ ಪರವಾಗಿ ಅಭಿನಂದಿಸುತ್ತೇನೆ ಮತ್ತು ಆಭಾರಿ ಆಗಿದ್ದೇನೆ.

(2) ಐದು ವರ್ಷಗಳ ಸೇವೆ ಪೂರ್ಣಗೊಂಡ ದಿನಗೂಲಿ ತೋಟಗಾರರಿಗೆ ಮಾಸಿಕ ವೇತನ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, "ಐದು ವರ್ಷಗಳ ಸೇವೆ ಪೂರ್ಣಗೊಂಡ ದಿನಗೂಲಿ ತೋಟಗಾರರಿಗೆ ಮಾಸಿಕ ವೇತನ ಕೊಡುವ ಬಗ್ಗೆ ಹಾಗೂ ತೋಟಗಾರರಿಗೆ ಬಡ್ತಿ ನೀಡುವ ಬಗ್ಗೆ ತೋಟಗಾರಿಕಾ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ಶ್ರೀ ಎ. ಕೃಷ್ಣಪ್ಪ (ತೋಟಗಾರಿಕಾ ರಾಜ್ಯ ಸಚಿವರು) :

ಮಾನ್ಯ ಅಧ್ಯಕ್ಷರೆ,

ತೋಟಗಾರಿಕೆ ಇಲಾಖೆಯಲ್ಲಿ ದಿನಾಂಕ : 1-7-84ಕ್ಕಿಂತ ಮುಂಚೆ ಕೆಲಸಕ್ಕೆ ಸೇರಿದ 2834 ಜನ ದಿನಗೂಲಿ ನೌಕರರಿದ್ದಾರೆ. ಇವರಲ್ಲಿ ಈವರೆಗೆ 2794 ಜನರನ್ನು ಮಾಸಿಕ ವೇತನ ಕೆಲಸಗಾರರನ್ನಾಗಿ ಪರಿವರ್ತಿಸಲಾಗಿದೆ. ದಿನಗೂಲಿ ನೌಕರರನ್ನು ಮಾಸಿಕ ವೇತನ ದಿನಗೂಲಿ ನೌಕರರನ್ನಾಗಿ ಪರಿವರ್ತಿಸಲು ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳು: ನಿಯಮಗಳು ನಿಗಧಿಪಡಿಸಿರುವ ಷರತ್ತುಗಳನ್ನು ಪೂರೈಸದೇ ಇರುವ ಕಾರಣ 40 ಜನ ದಿನಗೂಲಿ ನೌಕರರನ್ನು ಮಾತ್ರ ಮಾಸಿಕ ವೇತನದಡಿಯಲ್ಲಿ ಪರಿವರ್ತಿಸಿರುವುದಿಲ್ಲ.

ದಿನಾಂಕ: 1-12-90ಕ್ಕೆ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ 1799 ಜನ ನೌಕರರನ್ನು ಖಾಯಂಗೊಲಿಸಲಾಗಿದೆ. ದಿನಾಂಕ: 31-12-91ಕ್ಕೆ 10 ವರ್ಷಗಳ ನಿರಂತರ ಸೇವೆ ಸಲ್ಲಿಸಿದ 150 ದಿನಗೂಲಿ ನೌಕರರು, ದಿನಾಂಕ : 31-12-92ಕ್ಕೆ 10 ವರ್ಷಗಳ ಪೂರ್ಣ ಸೇವೆ ಸಲ್ಲಿಸಿದ 190 ದಿನಗೂಲಿ ನೌಕರರು,

ಒಟ್ಟು 340 ಮಾಸಿಕ ವೇತನ ನೌಕರರ ಸೇವೆಯನ್ನು ಸಕ್ರಮಗೊಳಿಸಲು ತೀವ್ರ ಪರಿಶೀಲನೆ ನಡೆಸಿದ್ದು ಸದ್ಯದಲ್ಲೆ ಆದೇಶ ಹೊರಡಿಸಲಾಗುತ್ತಿದೆ.

ತೋಟಗಾರರ ಹುದ್ದೆಯಿಂದ ತೋಟಗಾರಿಕೆ ಸಹಾಯಕರ ಹುದ್ದೆಗೆ ಸೇವಾ ಮುಂಬಡ್ತಿ ನೀಡಬೇಕಾದರೆ ಇಲಾಖೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವೃಂದ ಮತ್ತು